ಅವರೊಬ್ಬ ವಿದ್ವಾಂಸರಂತೆ ಕಂಡರೇ ಹೊರತು, ಕಲಾತ್ಮಕವಾಗಿ ತಮ್ಮ ಕಥನ ಮಾರ್ಗದಲ್ಲಿ ಅದನ್ನೊಂದು ವಿಶಾಲ ಜಾಡಿಗೆ ತರಲಿಲ್ಲ ಅನಿಸುತ್ತದೆ. ನವ್ಯರಲ್ಲಿ ಕೆಲವರು ಕಾಮವನ್ನು ಅಂತರಂಗದ ವಿಚಾರವಾಗಿ ತಂದರೆ; ಲಂಕೇಶ್, ಕೃಷ್ಣ, ತೇಜಸ್ವಿಯವರು ಗ್ರಾಮ ಬದುಕಿನಲ್ಲಿ ಕಾಮ ಅಲ್ಲಾಡಿಸಿದ ರೀತಿಯನ್ನು ಹಾಗು ಮುಗ್ಧತೆ ಮತ್ತು ಕಾಮದ ಮುಖಾಮುಖಿಯನ್ನು ಸಮರ್ಥವಾಗಿ ಎದುರಿಸಿದರು. ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದ ಕಥೆಗಾರರಾದ ಬಿ.ಸಿ ದೇಸಾಯಿಯವರು 'ಸಾವು' ಕಥೆಯಲ್ಲಿ, ಸಾವು ಸಾಂಕೇತಿಕವಾದರೂ, ಉದ್ದಕ್ಕೂ ಕಾಡುವುದು ಕಾಮದ ತಲ್ಲಣಗಳೇ ಆಗಿವೆ. ಬಿಗಿಯಾದ ಭಾಷೆ, ಕಟ್ಟಡ, ವಿವರಗಳನ್ನು ಅಚ್ಚುಕಟ್ಟಾಗಿ ಜೋಡಿಸುವ ಕ್ರಮದಿಂದ ಈ ಕಥೆ ಕನ್ನಡದ ಉತ್ತಮ ಕಥೆಗಳಲ್ಲಿ ಒಂದಾಗಿದೆ. ಕೊಂಚ ಒಳಹೊಕ್ಕು ನೋಡಿದರೆ, ಜೈನಧರ್ಮದ ತಾತ್ವಿಕತೆಯ ಮುಖ್ಯ ಅಂಗವಾದ ಅಹಿಂಸೆ ಇಲ್ಲಿ ಗುಪ್ತವಾಗಿ ಕೆಲಸ ಮಾಡಿದೆ. ಸೇಡಜಿ, ಸಂಕವ್ವ ಮೂಲಕ ಅನಾವರಣಗೊಳ್ಳುವ ಕಾಮ, ಹಿಂಸೆ, ಅಧ್ಯಾತ್ಮದ ವಿವರಗಳು ಬದುಕಿನ ಸೆಣಸಾಟದ ವಿಚಾರಗಳಾಗಿ ಕಾಣುತ್ತವೆ. ಇವರ ಜೊತೆಗೆ ನವ್ಯದ ಉತ್ತುಂಗದ ಸ್ಥಿತಿಯಲ್ಲಿ ಬರೆದ ಶಾಂತನಾಥ ದೇಸಾಯಿಯವರ 'ಓಂ ಣಮೋ' ಕಾದಂಬರಿ ಮತ್ತು ಕೆಲವು ಕಥೆಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡಲು ಅವಕಾಶಗಳಿವೆ.

ಸಂಪ್ರದಾಯದ ಬದುಕಿನಲ್ಲಿ ಕಾಮ ಮನುಷ್ಯನ ಸ್ವಾತಂತ್ರ್ಯವನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದನ್ನು ಅನಂತಮೂರ್ತಿ, ಚಿತ್ತಾಲ ಮುಂತಾದವರು ಕಲೆಯ ಸಾಧ್ಯತೆಗಳನ್ನು ಒಳಗೊಂಡೇ, ಆ ಬಗೆಯ ಪ್ರಶ್ನೆಗಳನ್ನು ಬಿಡಿಸಿಕೊಳ್ಳಲು ಯತ್ನಿಸಿದರು. ಯಶವಂತ ಚಿತ್ತಾಲರು ಏಕಕಾಲಕ್ಕೆ ಕಾಮದ ಒಳಾರ್ಥಗಳು, ಮಾನಸಿಕ ಘರ್ಷಣೆಗಳು, ಅಚಾನಕ್ಕಾಗಿ ಒಳನುಗ್ಗುವ ಸಾವು ಮುಂತಾದವನ್ನು ಪ್ರತಿಮೆ, ರೂಪಕಗಳ ಮುಖೇನ ಕಥನಮಾರ್ಗವನ್ನು ಮತ್ತಷ್ಟು ಕಲಾತ್ಮಕಗೊಳಿಸಿದರು. ಕಥನವನ್ನು ಕಲೆಯಾಗಿ ರೂಪಿಸುವಾಗಲೂ ಕಲೆಗಾರನಿಗೆ ಇರುವ ಬಹುದೊಡ್ಡ ಸವಾಲು ವಾಸ್ತವ ಚಿತ್ರವನ್ನು ಹಾಗೂ ಭಾಷೆಯ ಇನ್ನಿತರ ಸಾಧ್ಯತೆಗಳನ್ನು ಹೇಗೆ ಬಳಸಿಕೊಳ್ಳಬೇಕೆಂಬುದು. ಪ್ರಗತಿಶೀಲದ ಕೆಲವು ಕಥೆಗಳು ಸೋತಿದ್ದು ಈ ಕಾರಣದಿಂದಲೇ ಇರಬಹುದು. ಆದರೆ, ವಿದ್ವತ್ತಿನ ದೃಷ್ಟಿಯಿಂದ ಇವರು ಯಾರಿಗೇನೂ ಕಡಿಮೆ ಇರಲಿಲ್ಲ. 'ಜನಪ್ರಿಯ' ಎಂಬ ತತ್ವಕ್ಕೆ ಕಟ್ಟುಬಿದ್ದು ಭಾಷೆಯನ್ನು ಬಹಳ ಸಡಿಲಗೊಳಿಸಿದರು. ಹಾಗೆ ಸಡಿಲವಾದಾಗ ವಿವರಗಳು ಅನಗತ್ಯವಾಗಿ ಮುಂಚಾಚುತ್ತವೆ. ಭಾಷೆ, ಸಾಹಿತ್ಯ ಮಾಧ್ಯಮಕ್ಕೆ ದೊಡ್ಡ ಸಾಮಗ್ರಿ ಎಂದು ಭಾವಿಸಿದರೇ ಹೊರೆತು ಕಲೆಯಾಗಿ ಅದನ್ನು ಕಟೆದು ನಿಲ್ಲಿಸಲು ಸಾಧ್ಯವಾಗದೇ ಹೋಯಿತು. ಕಾರಂತರಿಗೂ ಪ್ರಗತಿಶೀಲರ ಕೆಲ ಬರಹಗಳಿಗೂ ಇದೇ ಅಂತರ.

ಪ್ರಗತಿಶೀಲರ ಮೇಜರ್ ಲೇಖಕರು ಸಾಮಾಜಿಕ ಅನ್ಯಾಯವನ್ನು ವಿರೋಧಿಸಲು ನಗರವನ್ನೇ ಹೆಚ್ಚು ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಾರೆ. 'ಗಿರಿಜಾ ಕಂಡ ಸಿನಿಮಾ', 'ಬೂಟ್ ಪಾಲೀಶ್', 'ಕೊನೆಯ ಗಿರಾಕಿ' ಮುಂತಾದ ಜನಪ್ರಿಯ ಕಥೆಗಳು ಸಾತ್ವಿಕ ಸಿಟ್ಟನ್ನು ಹೊರಹಾಕಿ, ಸಮಾಜದ ಒಂದು ವರ್ಗದ ಕೀಳುತನವನ್ನು ಒಪ್ಪುವುದಿಲ್ಲ. ಅದುವರೆಗೆ ಬಂದ ಕೆಲ ಕಥೆಗಳ ಆಶಯಗಳಿಗಿಂತ ಕೊಂಚ ಬೇರೆ ಅನುಭವವನ್ನು ನೀಡಿದರೂ ಬದುಕಿನ ತಾಳಿಕೆಯನ್ನು ಹೇಗೆ ಮುನ್ನೆಲೆಗೆ ತರಬೇಕೆಂಬುದರಲ್ಲಿ ಹಾಗೂ ಆ ದಾರಿಯಲ್ಲಿ ಮಾಗುವ ಹಂತದಲ್ಲೇ ನಿಂತುಬಿಡುತ್ತವೆ. ಇದಕ್ಕೆ ಹೋಲಿಸಿದರೆ ಮನುಷ್ಯನ ಸಿಟ್ಟು ಮತ್ತು ದ್ವೇಷಗಳು ಮಾನವೀಯತೆಗಳ ಅಡ್ಡದಲ್ಲಿ ಹೇಗೆ ಸೋಲಬಹುದು ಎಂಬುದಕ್ಕೆ ಎಲ್.ಎಸ್. ಶೇಷಗಿರಿರಾಯರ 'ಮುಯ್ಯಿ' ಮತ್ತು ಕೋಚೆ ಅವರ 'ಮುಕ್ಕಣ್ಣನ ಮುಕ್ತಿ' ಎರಡೂ ಕಥೆಗಳನ್ನು ಒಂದು ನಿದರ್ಶನಕ್ಕೆ ಎತ್ತಿಕೊಳ್ಳಬಹುದಷ್ಟೆ. ಕನ್ನಡ ವಿಮರ್ಶೆ ಮೇಜರ್ ಲೋಕದ ರೋಗದಲ್ಲಿ ಈ ಬಗೆಯ ಕಥೆಗಳನ್ನು ನಿರ್ಲಕ್ಷಿಸಿದೆ. ಎರಡೂ ಕಥೆಗಳು 'ಜಮೀನ್ದಾರಿ' ಜನರ ದಬ್ಬಾಳಿಕೆಗಳನ್ನು ತಾಳಿಕೆಯ ಗುಣದಿಂದ ವಿರೋಧಿಸುತ್ತವೆ. ಆದರೆ, ಇಲ್ಲಿಯೂ ಕಲಾತ್ಮಕ ಸಮಸ್ಯೆಯೇ ಎದ್ದುಕಾಣುತ್ತದೆ. ಇವೆಲ್ಲವನ್ನು ಅರಗಿಸಿಕೊಂಡಂತೆ ಕಥೆಗಳನ್ನು ಕಟ್ಟಿದ್ದು ಲಂಕೇಶ್ ಮತ್ತು ಇನ್ನಿತರರು. ಪ್ರಗತಿಶೀಲರ ಬಹುತೇಕ ಕಥೆಗಳಲ್ಲಿ ಭಾವುಕತೆ ಸದಾ ಕಣ್ಣಂಚಿನಲ್ಲಿ ತೇಲಾಡುತ್ತಿತ್ತು ಎಂಬ ಗುಮಾನಿಯೂ ಕಾಡುತ್ತದೆ. ಆದರೆ, ಲಂಕೇಶರು ಭಾವುಕತೆಯನ್ನು ವ್ಯಕ್ತಿಯ, ಸಮಾಜದ ಒಳತೋಟಿಯ ಪರೀಕ್ಷೆಯಾಗಿ ಕಂಡು ಗ್ರಹಿಸುತ್ತಾರೆ. ಮಾತ್ರವಲ್ಲ, ಅಲ್ಲಿ ಮನುಷ್ಯನ ಪ್ರಾಮಾಣಿಕತೆ